**ಕಲಾವಿದರೊಂದಿಗೆ ನಿಮ್ಮ ಕೊಳಲ ನಾದ ಅನುರಣಿಸಿದೆ. ನುಡಿಸಾಣಿಕೆಯಲ್ಲಿ ಹಿಂದೂಸ್ತಾನಿ ರಾಗಗಳೊಂದಿಗೆ ಹೇಗೆ ಹೊಂದಾಣಿಕೆ ಮಾಡಿಕೊಳ್ಳುತ್ತೀರಿ?**

ನಾನು ಸುಮಾರು 700–800 ಜುಗಲ್‌ಬಂದಿ ಕಛೇರಿ ನೀಡಿದ್ದೇನೆ. ಸಾರಂಗಿಯ ಸುಲ್ತಾನ್‌ಖಾನ್, ಸಿತಾರ್‌ನ ಸುಜತ್‌ಹುಸೇನ್ ಖಾನ್, ತಬಲಾ ಮಾಂತ್ರಿಕ ಉಸ್ತಾದ್ ಜಾಕೀರ್ ಹುಸೇನ್, ಮೋಹನ ವೀಣೆಯ ಪಂ. ವಿಶ್ವಮೋಹನ ಭಟ್, ಬಾನ್ಸುರಿಯ ಪಂ. ರೋಣು ಮಜುಂದಾರ್, ಹಿಂದೂಸ್ತಾನಿ ಗಾಯಕ ಅಜೇಯ ಚಕ್ರವರ್ತಿ, ಸಿತಾರ್‌ನ ಶಾಹೀದ್ ಪರ್ವೇಜ್... ಹೀಗೆ ಹಲವು ವಿದ್ವಾಂಸರ ಜೊತೆಗೆ ನುಡಿಸಿದ್ದೇನೆ. ಇಲ್ಲಿ ರಾಗಗಳ ಆಯ್ಕೆಯನ್ನು ಎರಡೂ ಶೈಲಿಯಲ್ಲಿ ಸಾಮಾನ್ಯವಾಗಿರುವುದನ್ನೇ ಮಾಡುತ್ತೇವೆ. ಉದಾಹರಣೆಗೆ, ರಾಗಗಳಾದ ಗೋರಕ್‌ಕಲ್ಯಾಣ್, ಜಂಜೂಟಿ, ಪೂರಿಯಾ ಧನಾಶ್ರೀ, ನಟಭೈರವ್, ರಾಮಕಲಿ, ಜೋಗ್, ಮಾಲ್‌ಕೌಂಸ್, ಭೈರವಿ, ಬಿಹಾಗ್ ಇತ್ಯಾದಿ ನುಡಿಸುತ್ತೇವೆ. ಅಲ್ಲದೆ ಕರ್ನಾಟಕ ಸಂಗೀತದ ಪೂರ್ವಿ ಕಲ್ಯಾಣ್ – ಹಿಂದೂಸ್ತಾನಿಯ ಪೂರಿಯಾ ಕಲ್ಯಾಣ್, ಕರ್ನಾಟಕ ಸಂಗೀತದ ಕೇದಾರ – ಹಿಂದೂಸ್ತಾನಿಯ ಹಮೀರ್



ಕಲ್ಯಾಣ್, ಕರ್ನಾಟಕ ಸಂಗೀತದ ಪಂತುವರಾಳಿ ಹಿಂದೂಸ್ತಾನಿಯ ತೋಡಿ... ಹೀಗೆ. ಈ ರಾಗಗಳ ಆಯ್ಕೆಯಿಂದ ಹೊಂದಾಣಿಕೆ ಮಾಡಿಕೊಳ್ಳುವುದು ಸುಲಭವಾಗುತ್ತದೆ.

◆ **ಹಿಂದೂಸ್ತಾನಿ ಸಂಗೀತದ ರಾಗಗಳನ್ನು ಕರ್ನಾಟಕ ಸಂಗೀತ ವಾದ್ಯದಲ್ಲಿ ನುಡಿಸುವ ಪರಿಪಾಠ ಹೆಚ್ಚಾಗುತ್ತಿದೆ. ಕರ್ನಾಟಕ ಸಂಗೀತದ ರಾಗಗಳನ್ನು ಹಿಂದೂಸ್ತಾನಿಯಲ್ಲಿ ನುಡಿಸುವ ಬೆಳವಣಿಗೆಯೂ ನಡೆಯುತ್ತಿದೆ. ಇದಕ್ಕೆ ನೀವೂ ಹೊರತಲ್ಲ. ಈ ಬೆಳವಣಿಗೆಗಳಿಂದ ಸಂಗೀತವನ್ನು ಚರ್ವಿತಚರ್ವಣ ಮಾಡಿದಂತಾಗುವುದಿಲ್ಲವೇ?**

ಹಿಂದೂಸ್ತಾನಿ ರಾಗಗಳನ್ನು ಕರ್ನಾಟಕ ಸಂಗೀತದಲ್ಲಿ ಅಳವಡಿಸುವುದು ಈಗೀಗ ಕಾಮನ್ ಆಗಿದೆ. ಅಪ್ಪಟ ಕರ್ನಾಟಕ ಸಂಗೀತ ರಾಗಗಳಾದ ವಾಚಸ್ಪತಿ, ಹಂಸಧ್ವನಿ, ಕೀರವಾಣಿ. ಷಣ್ಮುಖಪ್ರಿಯ, ಲತಾಂಗಿ, ಚಾರುಕೇಶಿ ಮುಂತಾದವುಗಳನ್ನು ಎರಡೂ ಶೈಲಿಯಲ್ಲಿ ನುಡಿಸಲಾರಂಭಿಸಿದ್ದೇವೆ. ಹಿಂದೂಸ್ತಾನಿ ಸಂಗೀತಗಾರರಾದ ಪಂ. ರವಿಶಂಕರ್, ಬಡೆ ಗುಲಾಮ್ ಅಲಿಖಾನ್ ಮುಂತಾದವರು ಕರ್ನಾಟಕ ಶಾಸ್ತ್ರೀಯ ಸಂಗೀತದ ಜೊತೆಗೆ ಉತ್ತಮ ಸಂಬಂಧ ಇಟ್ಟುಕೊಂಡಿದ್ದರು. ಅವರು ನುಡಿಸುತ್ತಿದ್ದ ಸವಾಲ್–ಜವಾಬ್, ರಿದಮ್ ಪ್ಯಾಟರ್ನ್ಸ್ ಎಲ್ಲವೂ ದಕ್ಷಿಣಾದಿಯಿಂದ ಪ್ರೇರಣೆಗೊಂಡಿದ್ದವು. ಇನ್ನು ಎಲ್. ಸುಬ್ರಹ್ಮಣ್ಯಂ, ಎಂ.ಎಸ್. ಗೋಪಾಲಕೃಷ್ಣನ್ ಮುಂತಾದವರು ಕರ್ನಾಟಕ ಸಂಗೀತವನ್ನು ಹಿಂದೂಸ್ತಾನಿ ಕೇಳುಗರಿಗೆ ಅರ್ಥ ಆಗುವ ಹಾಗೆ ನುಡಿಸುವ ಕಲೆಗಾರಿಕೆ ರೂಢಿಸಿಕೊಂಡಿದ್ದಾರೆ.

ನಾನು ಸಹ ಕೊಳಲಿನಲ್ಲಿ ಎಷ್ಟೋ ಹಿಂದೂಸ್ತಾನಿ ರಾಗಗಳನ್ನು ನುಡಿಸಿದ್ದೇನೆ. ಒಳ್ಳೊಳ್ಳೆಯ ಐಡಿಯಾಗಳನ್ನು ವಾದನದಲ್ಲಿ ಅಳವಡಿಸಿದ್ದೇನೆ. ಹಿಂದೂಸ್ತಾನಿ ಶೈಲಿಯಲ್ಲಿರುವ ವಿಲಂಬಿತ್, ಮಧ್ಯಲಯ, ದೃತ್... ಎಲ್ಲವನ್ನೂ ಕೊಳಲಿನಲ್ಲಿ ನುಡಿಸುತ್ತೇನೆ. ಕರ್ನಾಟಕ ಸಂಗೀತದ ರಾಗ–ತಾನ–ಪಲ್ಲವಿಯನ್ನು ಹಿಂದೂಸ್ತಾನಿಯ ಮೂರೂ ಲಯಗಳಲ್ಲಿ ನುಡಿಸಿದ್ದೇನೆ. ಇವೆಲ್ಲವೂ ಪಂ. ಜಸರಾಜ್ ಅವರ ಮಾರ್ಗದರ್ಶನದಿಂದ ಸಾಧ್ಯವಾಗಿದ್ದು. ನಾನು ಎರಡೂ ಶೈಲಿಗಳಲ್ಲಿ ಕಲಿತಿರುವುದರಿಂದ ಸಂಗೀತವನ್ನು ಬ್ಲೆಂಡ್ ಮಾಡಿ ನುಡಿಸುವ ಚಮತ್ಕಾರವನ್ನೂ ರೂಢಿಸಿಕೊಂಡಿದ್ದೇನೆ.

◆ **'ಫ್ರೆಂಚ್ ನೈಟ್‌ಹುಡ್' ಪ್ರಶಸ್ತಿ ದೊರೆತಿರುವುದರ ಬಗ್ಗೆ ಏನನ್ನಿಸುತ್ತದೆ?**

'ಫ್ರೆಂಚ್ ನೈಟ್‌ಹುಡ್ ಪ್ರಶಸ್ತಿ' (ಷೆವಲಿಯರ್ ಡಿ ಆರ್ಡರ್ ದೆಸ್ ಆರ್ಟ್ ಅಟ್ ದಿ ಲೆಟರ್ಸ್) ಫ್ರಾನ್ಸ್ ಸರ್ಕಾರ ಕೊಡಮಾಡುವ ಅತ್ಯುನ್ನತ ಗೌರವ. ಇದು ನಮ್ಮ ದೇಶದ ಪದ್ಮಪ್ರಶಸ್ತಿಗಳಿಗೆ ಸರಿಸಮನಾದುದು. ಈ ಪ್ರತಿಷ್ಠಿತ ಪ್ರಶಸ್ತಿಯನ್ನು 1802ರಲ್ಲಿ ನೆಪೋಲಿಯನ್ ಬೋನಾಪಾರ್ಟೆ ಅವರು ಹುಟ್ಟುಹಾಕಿದ್ದರು. ಇದನ್ನು ಕಲೆ, ವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಜಾಗತಿಕವಾಗಿ ಗಣನೀಯ ಸಾಧನೆ ಮಾಡಿದವರಿಗೆ ನೀಡಲಾಗುತ್ತದೆ.

1985ರಲ್ಲಿ ಮನ್ನಾಡೇ, 2000ದಲ್ಲಿ ಪಂ. ರವಿಶಂಕರ್, 2005ರಲ್ಲಿ ಬಾಲಮುರಳಿಕೃಷ್ಣ, 2007ರಲ್ಲಿ ಲತಾ ಮಂಗೇಶ್ಕರ್ ಅವರಿಗೆ ಈ ಪ್ರಶಸ್ತಿ ಲಭಿಸಿತ್ತು. ಭಾರತದಲ್ಲಿ ಈ ಪ್ರಶಸ್ತಿಗೆ ಭಾಜನರಾದ ಕಿರಿಯ ವಯಸ್ಸಿನ ಕಲಾವಿದ ಎಂಬ ಹೆಮ್ಮೆ ನನ್ನದು. ಈ ಪ್ರಶಸ್ತಿ ನನಗೆ ಲಭಿಸಿರುವುದರ ಮೂಲಕ ಭಾರತ–ಫ್ರಾನ್ಸ್ ದೇಶಗಳ ನಡುವೆ ಸಾಂಸ್ಕೃತಿಕ ಸಂಬಂಧವೊಂದು ಬೆಸೆದಂತಾಗಿದೆ ಎಂಬುದು ನನ್ನ ಭಾವನೆ. ಭಾರತೀಯ ಸಂಗೀತಕ್ಕೆ ಫ್ರಾನ್ಸ್‌ನಲ್ಲಿ ಬಹಳ ಗೌರವ ಕೊಡುತ್ತಾರೆ. ಸಪೋರ್ಟ್ ಕೂಡ ಮಾಡ್ತಾರೆ. ಶಾಸ್ತ್ರೀಯ ಸಂಗೀತದ ಜೊತೆಗೆ ಸಿನಿಮಾ ಸಂಗೀತವನ್ನೂ ಅಲ್ಲಿಯ ಜನ ಇಷ್ಟಪಡುತ್ತಾರೆ. ಹೀಗಾಗಿ ಸಂಗೀತದ ಮೂಲಕ ಎರಡು ದೇಶಗಳ ನಡುವೆ ಸೌಹಾರ್ದ ಸಂಬಂಧವೂ ಬೆಸೆದಂತಾಗಿದೆ. ■


